ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ  ನ್ಯಾಯಾಲಯ
ಸಿದ್ದಾಪುರ

ಸಿ.ಸಿ. 794/2023

| | |
|---|---|
| ಸಿ.ಡಬ್ಲ್ಯೂಃ | 7 |
| ಪಿ.ಡಬ್ಲ್ಯೂಃ | 4 |

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | ಸುನೀಲ್ |
| ತಂದೆ ಹೆಸರು | ಃ | ನಿಂಗಪ್ಪ  ಜಂಗಲಿ |
| ವಯಸ್ಸು | ಃ | 36  ವರ್ಷ |
| ವೃತ್ತಿ | ಃ | ಪೊಲೀಸ್ ಪೇದೆ , ಹಳಿಯಾಳ ಪೊಲೀಸ್ ಠಾಣೆ |
| ವಾಸ | ಃ | ಹಳಿಯಾಳ |

**ಸಾಕ್ಷಿಗೆ  ಪ್ರಮಾಣ  ವಚನ  ಮಾಡಿಸಿದ ದಿನಾಂಕಃ 15-04-2026**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ**

ನಾನು 2022 ರಿಂದ 2025 ರವರೆಗೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 20-08-2023 ರಂದು ತನಿಖಾಧಿಕಾರಿಯವರ ಆದೇಶದ ಮೇರೆಗೆ  ಸಿದ್ದಾಪುರ ತಾಲೂಕಿನ ಚಪ್ಪರಮನೆ ಗ್ರಾಮಕ್ಕೆ ಗದ್ದೆಮನೆಯಲ್ಲಿ ಪಂಚನಾಮೆಯ ಕಾಲಕ್ಕೆ ಪೋಟೋಗಳನ್ನು ಸೋನಿ ಹ್ಯಾಂಡಿ ಕ್ಯಾಮ ಕ್ಯಾಮರಾದಲ್ಲಿ  ತೆಗೆದುಕೊಂಡಿರುತ್ತೇನೆ.   ನಂತರ ವಾಪಸ್ಸ ಠಾಣೆಗೆ ಬಂದು ಸದ್ರಿ  ಪೋಟೋಗಳನ್ನು  ಡಾಟಾ ಕೇಬಲ ಮುಖಾಂತರ ಕಂಪ್ಯೂಟರಗೆ ವರ್ಗಾಯಿಸಿ ಠಾಣೆಯಲ್ಲಿರುವ ಎಪ್ಸಾಂನ ನ ಕಲರ್ ಪ್ರಿಂಟರನಿಂದ ಪ್ರಿಂಟ್ ತೆಗೆದಿರುತ್ತೇನೆ.   ಸದ್ರಿ ಪೋಟೋಗಳನ್ನು ಒಂದು ಡಿ.ವಿ.ಡಿಗೆ ಹಾಕಿ ತನಿಖಾಧೀಕಾರಿಯವರಿಗೆ ನೀಡಿ   ಭಾರತೀಯ ಸಾಕ್ಷಾ ಅಧಿನಿಯಮ 65(ಬಿ) ರಂತೆ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.  ಸಾಕ್ಷಿಗೆ ಪೋಟೋಗಳನ್ನು ತೋರಿಸಿದ್ದು  ಸಾಕ್ಷಿಯ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳು

ಈಗಾಗಲೇ ನಿ.ಪಿ– 4 ರಿಂದ 7 ಎಂದು ಗುರುತಿಸಲಾಗಿರುತ್ತದೆ.  ಸಾಕ್ಷಿಗೆ ಈಗ ಸಿ.ಡಿಯನ್ನು ತೋರಿಸಿದ್ದು ಸಾಕ್ಷಿಯು ಈಗ ನೋಡಿ ಗುರುತಿಸಿದ್ದು ಅದನ್ನು ನಿ.ಪಿ– 8 ಎಂದು ಗುರುತಿಸಲಾಯಿತು.  ಸಾಕ್ಷಿಗೆ ಈಗ  ಭಾರತೀಯ ಸಾಕ್ಷಾ ಅಧಿನಿಯಮ 65(ಬಿ) ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ– 9  ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ೨9 (ಎ) ಎಂದು ಗುರುತಿಸಲಾಯಿತು.

<u>**ಪಾಟೀಸವಾಲು ಃ ಆರೋಪಿ ಪರ ವಕೀಲರಿಂದ**</u>

ಪೋಟೋಗ್ರಾಫಿ ಬಗ್ಗೆ ತಾವು ವಿಶೇಷ ಶಿಕ್ಷಣ ಮಾಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಬುನಾದಿ ತರಬೇತಿಯಲ್ಲಿ ಇದರ ಬಗ್ಗೆ ನಮಗೆ ತರಬೇತಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪೋಟೋಗಳನ್ನು ಯಾವ ಘಟನೆ ಬಗ್ಗೆ ತೆಗೆದಿರುತ್ತೀರಾ ಎಂದು ನಿಮಗೆ ನಿಖರ ಮಾಹಿತಿ ಇಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮಾಹಿತಿ ಇರುತ್ತದೆ ಎಂದು ನುಡಿಯುತ್ತಾರೆ.  ನೀವು ತೆಗೆದ ಪೋಟೋದಲ್ಲಿ ತೆಂಗಿನ ಕಾಯಿ ಕಾಣಿಸುತ್ತಿದ್ದೇಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು  ಇಲ್ಲ ಎಂದು ನುಡಿಯುತ್ತಾರೆ.  ನಿ.ಪಿ– 4 ರಿಂದ 7 ಪೋಟೋಗಳಲ್ಲಿ  ಸುತ್ತ ಮುತ್ತ ಪ್ರದೇಶ ಕಾಡಿನಿಂದ ಕೂಡಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.  ನಿ.ಪಿ– 4 ರಿಂದ 7 ಪೋಟೋಗಳು ಈ ಪ್ರಕರಣಕ್ಕೆ ಹಾಗೂ ಈ ಘಟನೆ ಸಂಬಂದಿಸಿದ ಪೋಟೋಗಳಲ್ಲ ಎಂದರೆ ಸರಿಯಲ್ಲ.  ಪೋಟೋಗಳನ್ನು ತೆಗೆಯಲು ಹಾಗೂ ಅವುಗಳನ್ನು ಡೇವಲಪ್ ಮಾಡಲು ನನಗೆ ಯಾವುದೇ ತಾಂತ್ರಿಕ ಪರಿಣಿತಿ ಇರುವುದಿಲ್ಲ ಎಂದರೆ ಸರಿಯಲ್ಲ.  ನಾನು ಮೇಲಾಧೀಕಾರಿಯವರ ಮಾತಿನ ಮೇರಗೆ ನನ್ನ ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಸ.ಒ

ಸಹಿ ಇದೆ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಸಿದ್ದಾಪುರ